

Dr. Srikant Morlawar (CMD)
Homeocare International

# Get the best treatment for Eczema at Homeocare International

ಮನುಷ್ಯನ ಜೀವನದಲ್ಲಿ ಯಾವುದೋ ಸಂದರ್ಭದಲ್ಲಿ ಒಂದು ಸಾರಿ ಚರ್ಮರೋಗಕ್ಕೆ ಗುರಿಯಾಗುವುದು ಸಹಜವಾಗಿದೆ. ಇದರಲ್ಲಿ ಕೆಲವು ರೋಗಗಳಿಗೆ ಯಾವುದೇ ತರಹದ ಚಿಕಿತ್ಸೆ ಬೇಕಾಗುವುದಿಲ್ಲ, ಅವಸರವಿರುವುದಿಲ್ಲ. ತನ್ನಷ್ಟಕ್ಕೆ ತಾನೇ ಅವು ಕಡಿಮೆಯಾಗುತ್ತವೆ. ಆದರೆ ಕೆಲವು ರೋಗಗಳು ದೀರ್ಘಕಾಲವಾಗಿ ಉಳಿದುಹೋಗುತ್ತವೆ. ಅಂತಹ ಸಂದರ್ಭದಲ್ಲಿ ಅವರು ನಾಲ್ಕು ಜನರ ಮಧ್ಯದಲ್ಲಿ ಹೋಗಲು ಅಸಹ್ಯಪಡುತ್ತಾರೆ. ಮಾನಸಿಕ ಹಾಗೂ ಸಾಮಾಜಿಕ ಒತ್ತಡಕ್ಕೆ ಗುರಿಯಾಗುತ್ತಾರೆ. ಇದರಂತೆ ಒಂದು ರೋಗ ಎಸ್ಜಿಮ. ಇದನ್ನು ಹೇಗೆ ಗುರುತಿಸಬೇಕು? ಮತ್ತು ಕಾನ್ಸಿಟಿಟ್ಯೂಷನಲ್ ಹೋಮಿಯೊ ವೈದ್ಯದಿಂದ ಇದಕ್ಕೆ ಪೂರ್ತಿ ಚಿಕಿತ್ಸೆ ಹೇಗೆ ಸಿಗುತ್ತದೆಯೆಂದು ನಾವು ನೋಡೋಣ.

ಇಸುಬು ಅಥವಾ ಎಸ್ಜಿಮ ಒಂದು ಬಗೆಯ ಚರ್ಮವ್ಯಾಧಿಯಾಗಿದೆ. ಚರ್ಮದಲ್ಲಿ ಅಲ್ಲಲ್ಲಿ ಕೊಂಚ ಅಗಲದಲ್ಲಿ ಕೆಂಪಗಾಗಿ ಬಿರುಕು ಬಿಡುತ್ತದೆ ಹಾಗೂ ಅತೀವ ತುರಿಕೆ ಮತ್ತು ಉರಿಯಿಂದ ಕೂಡಿರುತ್ತದೆ.

ಈ ಚರ್ಮವ್ಯಾಧಿಯು ಹಿರಿಯರಲ್ಲಿ ಮತ್ತು ಮಕ್ಕಳಲ್ಲಿಯೂ 65% ಮತ್ತು ಶಿಶುಗಳಲ್ಲಿ 85% ಕಾಣಿಸಿಕೊಳ್ಳುತ್ತದೆ. ಇಸುಬು ಎದುರಾಗಲು ಆನುವಂಶಿಕ ಕಾರಣ ಪ್ರಮುಖವಾಗಿದ್ದು, ನಮ್ಮ ಹಿರಿಯರಲ್ಲಿ ಯಾರಿಗಾದರೂ ಈ ತೊಂದರೆ ಇದ್ದರೆ ಕುಟುಂಬ ಸದಸ್ಯರಲ್ಲಿಯೂ ಕಂಡುಬರಬಹುದು. ಸಾಮಾನ್ಯವಾಗಿ ಈ ತೊಂದರೆಯಿರುವ ವ್ಯಕ್ತಿಗಳಲ್ಲಿ ರೋಗನಿರೋಧಕ ಶಕ್ತಿ ಕಡಿಮೆಯಾಗಿರುತ್ತದೆ.

## ಎಸ್ಜಿಮ ಸಮಸ್ಯೆಗಳು :

ಅಲರ್ಜಿಕ್ ಕಾಂಟ್ಯಾಕ್ಟ್ ಎಸ್ಜಿಮ (ಡರ್ಮಟೈಟಿಸ್) 2) ಕಾಂಟ್ಯಾಕ್ಟ್ ಎಸ್ಜಿಮ 3) ಅಟೋಪಿಕ್ ಡರ್ಮಟೈಟಿಸ್ **4)** ಸೆಬೋರಿಕ್ ಎಸ್ಜಿಮ 5) ಸ್ಟಾಸಿಸ್ ಎಸ್ಜಿಮ 6) ನುಮ್ಯುಲರ್ ಎಸ್ಜಿಮ 7) ಡಿಸ್ಹೈಡ್ರೋಟಿಕ್ ಎಸ್ಜಿಮ 8) ನ್ಯೂರೊ ಡರ್ಮಟೈಟಿಸ್

## ಎಸ್ಜಿಮ ಕಾರಣಗಳು:

ಎಸ್ಜಿಮಕ್ಕೆ ಖಚಿತವಾದ ಕಾರಣಗಳು ಈವರೆಗೂ ಸ್ಪಷ್ಟವಾಗಿ ತಿಳಿದಿಲ್ಲ, ಆದರೆ ಆನುವಂಶಿಕ ಕಾರಣ ಮತ್ತು ಪರಿಸರದಂತಹ ಅಂಶಗಳು ಕಾರಣವಾಗಬಹುದು. ಎಸ್ಜಿಮ ಅಂಶಗಳನ್ನು ಎದುರಿಸಿದಾಗ ನಮ್ಮ ಶರೀರದ ರೋಗನಿರೋಧಕ ಶಕ್ತಿಯು ಸಾಧಾರಣ ಸ್ಥಿತಿಗಿಂತ ಹೆಚ್ಚಾಗಿ ಪ್ರತಿಕ್ರಿಯೆ ತೋರಿಸಿದಾಗ ಎಸ್ಜಿಮ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ಎಸ್ಜಿಮವನ್ನು ಪ್ರೇರೇಪಿಸುವ ಅಂಶಗಳು:

ಮುಖ್ಯವಾಗಿ ಒಣಚರ್ಮ ಇರುವವರಲ್ಲಿ ಎಸ್ಜಿಮ ಹೆಚ್ಚಾಗಿ ಬರುವ ಅವಕಾಶವಿರುತ್ತದೆ. ಧೂಳು ಮತ್ತು ಪರಿಸರದಲ್ಲಿನ ಬದಲಾವಣೆ, ಹೂವಿ ಪರಾಗ, ಸೊಳ್ಳೆ, ತಿಗಣೆ ಮೊದಲಾದ ಕಡಿಯುವ ಕೀಟಗಳು, ಪ್ರಾಣಿಗಳ ಒಡನಾಟ, ಸೋಪಿನ ಪುಡಿ, ಡಿಟರ್ಜೆಂಟ್ಗಳು, ಶ್ಯಾಂಪುಗಳು ಮತ್ತು ಕೆಲವು ಆಹಾರ ಪದಾರ್ಥಗಳು (ಉದಾಹರಣೆಗೆ ಹಣ್ಣುಗಳು, ತರಕಾರಿಗಳು, ಹಾಲು, ಮೊಟ್ಟೆಗಳು ಮೊದಲಾದವು), ಸೌಂದರ್ಯವರ್ಧಕ ಪ್ರಸಾದನಗಳು, ಕೈಗೆ ಹಾಕುವ ಗಡಿಯಾರಗಳು ಮತ್ತು ಡಯಾಪರ್ಗಳು, ಡಿಯೊಡ್ರಂಟ್ಗಳು, ಬೆವರು, ಉಣ್ಣೆ ಬಟ್ಟೆಗಳು ಮತ್ತು ತುರಿಕೆಯಾಗುವ ಕೆಲವು ವಸ್ತುಗಳು ಎಸ್ಜಿಮವನ್ನು ಪ್ರೇರೇಪಿಸುತ್ತವೆ. ಮತ್ತೆ ಕೆಲವು ತರಹದ ಬ್ಯಾಕ್ಟೀರಿಯಾಗಳು, ವೈರಸ್, ಶಿಲೀಂಧ್ರ ಮತ್ತು ಮಾನಸಿಕ ಒತ್ತಡದಂತಹ ಸಮಸ್ಯೆಗಳೂ ಕೂಡ ಎಸ್ಜಿಮವನ್ನು ಉಂಟುಮಾಡಬಹುದು.

## ಎಸ್ಜಿಮ ಲಕ್ಷಣಗಳು:

ಎಲ್ಲರಲ್ಲಿ ಒಂದೇ ತರಹದ ಲಕ್ಷಣಗಳು ಇರುವುದಿಲ್ಲ, ಮುಖ್ಯವಾಗಿ ಎಸ್ಜಿಮದಲ್ಲಿ ಮೊಟ್ಟಮೊದಲಿಗೆ ಕಾಣಿಸಿಕೊಳ್ಳುವುದು ತುರಿಕೆ. ಅದೇನೆಂದರೆ ಕೆಂಪಾದ ಊದಿಕೊಂಡ ಬೊಕ್ಕೆಗಳು ಕಾಣಿಸಿಕೊಳ್ಳುತ್ತವೆ. ನಂತರ ಬೊಕ್ಕೆಗಳು ನೀರಿನಿಂದ ತುಂಬಿ ಸೋರುತ್ತವೆ, ಅನಂತರ ಚರ್ಮವು ಕಪ್ಪಾಗಿ ಕಾಣಿಸಿಕೊಳ್ಳುತ್ತದೆ.

ಹೆಚ್ಚಾಗಿ ಚರ್ಮದ ಮೇಲೆ ಕಾಣಿಸಿಕೊಳ್ಳುವ ಭಾಗಗಳು ಮುಖದ ಮೇಲೆ, ತಲೆಯಲ್ಲಿ, ಮೊಣಕಾಲಿನ ಹಿಂದುಗಡೆ, ಪಾದದ ಮೇಲೆ ಮತ್ತು ಮೊಣಕೈ ಭಾಗದಲ್ಲಿ ಹಾಗೂ ಮಣಿಕಟ್ಟು, ಚರ್ಮ ಮಡಿಸುವ ಭಾಗದಲ್ಲಿ ಹಾಗೂ ಕಿವಿಯ ಹಿಂಭಾಗದಲ್ಲಿ, ಪಾದದಡಿಯಲ್ಲಿ ಕಾಣಿಸಿಕೊಳ್ಳುವುದು. ಮಕ್ಕಳಲ್ಲಿ ಮೊದಲಿಗೆ ಕೆನ್ನೆಯ ಮೇಲೆ ಊದಿಕೊಂಡ ದದ್ದುಗಳು ಕಾಣಿಸಿಕೊಳ್ಳುತ್ತವೆ. ಕೆಲವು ತಿಂಗಳ ಕಾಲ ಈ ದದ್ದುಗಳು ಕೈ, ಕಾಲಿನಿಂದ ಶರೀರದ ಇತರ ಭಾಗಕ್ಕೆ ಹರಡುತ್ತವೆ. 80% ವರೆಗೆ ಎಸ್ಜಿಮದಿಂದ ನರಳುವ ಚಿಕ್ಕಮಕ್ಕಳು ಹೆಚ್ಚಾದ ಜ್ವರ (High fever) ಅಲ್ಲದೆ ಅಸ್ತಮಾದಂತಹ ರೋಗಗಳಿಗೆ ಗುರಿಯಾಗುವ ಸಾಧ್ಯತೆಯಿದೆ.

## ರೋಗ ನಿರ್ಧರಿಸುವ ತನಿಖೆಗಳು:

ರೋಗಲಕ್ಷಣಗಳು, ಕುಟುಂಬದ ಆರೋಗ್ಯ ಚರಿತ್ರೆ ಮತ್ತು ವೈಯಕ್ತಿಕ ಆರೋಗ್ಯ ಚರಿತ್ರೆ ತಿಳಿದುಕೊಂಡ ಮೇಲೆ ಈ ರೋಗವನ್ನು ನಿರ್ಧರಿಸಬೇಕಾಗುತ್ತದೆ. ಕೆಲವು ಸಾರಿ ರಕ್ತ ಪರೀಕ್ಷೆಗಳು, ಚರ್ಮದ ಬಯಾಪ್ಸಿ ಮಾಡಬೇಕಾಗುತ್ತದೆ.

ಹೋಮಿಯೊಕೇರ್ ಚಿಕಿತ್ಸೆ: ಹೋಮಿಯೊಕೇರ್ ಇಂಟರ್ನ್ಯಾಷನಲ್ ಟ್ರೀಟ್ಮೆಂಟ್ನಲ್ಲಿ ಆನುವಂಶಿಕ (ಜೆನೆಟಿಕ್) ಸಾಂವಿಧಾನಿಕ (ಕಾನ್ಸಿಟ್ಯೂಷನಲ್) ವಿಧಾನದಿಂದ ರೋಗಿಯ ಕಂಡೀಶನ್ನಲ್ಲಿ ಆತನ ರೋಗದ ಲಕ್ಷಣ ಮಾತ್ರವಲ್ಲದೆ ಆತನ ಮಾನಸಿಕ ಹಾಗೂ ಶಾರೀರಿಕ ಲಕ್ಷಣಗಳನ್ನು ವಿವರವಾಗಿ ಅಧ್ಯಯನ ನಡೆಸಿ ಈ ರೋಗವನ್ನು ಮುಖ್ಯಕಾರಣಗಳಿಂದ ಅಂದರೆ ರೋಗನಿರೋಧಕ ಶಕ್ತಿ ಕಡಿಮೆಯಾಗುವುದನ್ನು ಸರಿಪಡಿಸಿದ ನಂತರ ರೋಗವನ್ನು ಕ್ರಮವಾಗಿ ಸರಿಪಡಿಸಲಾಗುತ್ತದೆ. ಇದರಿಂದ ಈ ಎಸ್ಜಿಮ ರೋಗವನ್ನು ಶಾಶ್ವತವಾಗಿ ಕಡಿಮೆಮಾಡಬಹುದು. ಇದನ್ನು ಮತ್ತೆ ತಿರುಗಿ ಬರದ ಹಾಗೆ ಚಿಕಿತ್ಸೆ ಕೊಡಲಾಗುವುದು.

ಹೋಮಿಯೊಕೇರ್ ಇಂಟರ್ನ್ಯಾಷನಲ್ಲಿ ಇನ್ನೂ ಬಹಳಷ್ಟು ರೋಗಗಳಿಗೆ ಚಿಕಿತ್ಸೆ ನೀಡಲಾಗುತ್ತದೆ. ಇಂತಹುದೇ ಸಮಸ್ಯೆಗಳಾದ ಹೈಪೊಥೈರಾಯ್ಡ್, ಹೈಪರ್ಥೈರಾಯ್ಡ್, ಪಿಸಿಬಿಡಿ, ಮೈಗ್ರೇನ್, ಮಧುಮೇಹ, ಹೇರ್ಫಾಲ್, ಕಿಡ್ನಿ ಸಮಸ್ಯೆಗಳು, ಗ್ಯಾಸ್ಟ್ರಿಕ್ ಸಮಸ್ಯೆಗಳು, ಆರ್ಥ್ರೈಟಿಸ್ ಇನ್ನೂ ಇತರೆ ದೀರ್ಘಕಾಲಿಕ ರೋಗಗಳಿಗೆ ಒಳ್ಳೆಯ ಮತ್ತು ಪೂರ್ತಿ ಪರಿಷ್ಕಾರ ದೊರೆಯುತ್ತದೆ.

**Free Consultation 955 000 1133 Toll Free 1800 108 1212**